# PG – 032

**II Semester M.T.A. (Integrated 5 Years Course) Examination, June/July 2013**
**(Semester Scheme)**
**TOURISM ADMINISTRATION**
**Paper – 2.2 : Kannada ಸಾಹಿತ್ಯ ಸಲ್ಲಾಪ – 0**

Time : 3 Hours | Max. Marks : 80

ಸೂಚನೆ : ಸೂಚನೆಗೆ ಅನುಗುಣವಾಗಿ ಉತ್ತರಿಸಿ.

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು
ಜನನಿಯಂ ಜನಕನಂ ನಲ್ಲಳಂ ದೈವಮಂ
ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ ಕೊಡವ ಬಿಡುವತಿ ಕಲಿಗಳು
ಜನರೊಳಗೆ ಜನಿಸರೆಂದೆನಲು ನೀನೀಗ ಪೇ
ಳ್ದನಿತಜೊಳು ಬೇಡಿದಡೆ ಕೊಡಬೇಡ ಕೊಡೆಯನೀ
ಯೆನೆ ಲೋಭವೇಕರಸ ಎನಲಿದಲ್ಲದೆ ಬೇಜಿಮಾತೆಪಿತರಿಲ್ಲೆಂದನು.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×2=4)

1) ವಿಲಾಸವತಿ
2) ದೇಶನೋಡು, ಕೋಶ ಓದು
3) ಕೆ.ಪಿ. ಪೂರ್ಣಚಂದ್ರ ತೇಜಸ್ವಿ
4) ವೈದೇಹಿ

II. ಅ) ಐದು ಪದಗಳಿಗೆ ಅರ್ಥ ಬರೆಯಿರಿ : (1×5=5)

1) ಪೊಡವೃ
2) ಇಳೆ
3) ಸತ್ತಿಗೆ
4) ಆತ್ಮಾಂಗನೆ
5) ಎಕ್ಕಲ
6) ಉಪದ್ರವ
7) ಚೋದ್ಯ

ಆ) ಐದು ಪದಗಳನ್ನು ಬಿಡಿಸಿ ಬರೆಯಿರಿ : (1×5=5)

1) ಹೆಬ್ಬಾಗಿಲು
2) ಸೂರ್ಯಚಂದ್ರ ನಕ್ಷತ್ರಗಳು
3) ಹಣೆಗಣ್ಣ
4) ಹಗಲುಗನಸು
5) ದೇವರಿಂದ
6) ಕವೀಂದ್ರ
7) ಹುಲ್ಲುಗಾವಲು

P.T.O.

KLE SNC MTTM

ಇ) ಐದು ಪದಗಳಿಗೆ ಮೂಲರೂಪ ಬರೆಯಿರಿ : (1×5=5)

1) ರಾಯ 2) ಸಾರ್ದವ್ವ

3) ಮೊಖ 4) ಕುಂತವಳೆ

5) ಬ್ಯಾಸಗಿ 6) ಹೈಕಳು

7) ಕಪ್ಪುರ

ಈ) 'ಕಮಲಮುಖಿ', ಹೃದಯಶಾರದೆ' – ಇದೇ ರೀತಿಯ ಐದು ಪದಗಳನ್ನು ಸ್ವಂತವಾಗಿ ರಚಿಸಿರಿ. (1×5=5)

III. ಅ) ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (5×4=20)

1) ಒಲಿದು ಬಂದ ಹೆಣ್ಣನ್ನು 'ಶೀಲಪರಿಪಾಲನಂ ಮಾಳ್ಪುದು' ಎಂದು ಬುದ್ಧಿವಾದ ಹೇಳುವುದು ರಾಜಧರ್ಮವೇ ? ಆಲೋಚಿಸಿ.

2) ಚಂದ್ರಮತಿ, ಸೀತೆ, ದ್ರೌಪದಿ ಮತ್ತು ಅಹಲ್ಯೆಯರು ಪಟ್ಟಪಾಡಿಗೆ ಅವರ ಗಂಡಂದಿರೇ ಹೊಣೆಯೇ ?

3) ಪ್ಯಾಪಿಲಾನನ ಮನಸ್ಸಿನ ಕ್ಷೋಭೆಯನ್ನು ವಿವರಿಸಿ.

4) 'ವ್ಯಯಕ್ಷಮತೆ'ಯ ಅರಿವು ಶ್ರೀಮಂತರಿಗೂ ಹೇಗೆ ಅತ್ಯಗತ್ಯವಾದುದು ?

5) ಲೇಖಕರು ಗುರುತಿಸಿರುವಂತೆ ಬುಲ್ಡೋಜರ್‌ನಿಂದಾದ ಕೆಲವು ಅನಾಹುತಗಳನ್ನು ಹಾಗೂ ಅವುಗಳ ಸ್ವರೂಪವನ್ನು ವಿವರಿಸಿ.

6) ನಾಯಿ ಸಾಕುವಿಕೆಯಿಂದ ಮನುಷ್ಯ ಎದುರಿಸಬೇಕಾದ ಅನಾನುಕೂಲಗಳು ಹಾಗೂ ವಹಿಸಬೇಕಾದ ಜವಾಬ್ದಾರಿಗಳೇನು ?

7) ಭಗವಾನ್, ದಿನಕರ ಪಾತ್ರಗಳ ವೈಶಿಷ್ಟ್ಯವೇನು ?

IV. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (3×10=30)

1) ನೀನೆಮಗೆ ವಲ್ಲಭನಾಗು ಎಂದು ಕೇಳಿದ ಹೊಲತಿಯರಿಗೆ ಹರಿಶ್ಚಂದ್ರನ ಪ್ರತಿಕ್ರಿಯೆಯೇನು ?

2) ರಂಗಪ್ಪನ ಶೋಷಣೆಯ ತೀವ್ರತೆಯನ್ನು ಚಿತ್ರಿಸಿ.

3) ಅಕ್ಕುವಿನ ವಿಷಾದ ಬದುಕನ್ನು ವೈದೇಹಿ ಹೇಗೆ ಕಟ್ಟಿಕೊಟ್ಟಿದ್ದಾರೆ ?

4) 'ನಾಯಿ ಸಾಕುವ ಅನುಭವಕ್ಕೂ – ತಾಯಿಯೊಬ್ಬಳು ಮಗುವನ್ನು ಸಾಕುವ ಅನುಭವಕ್ಕೂ ಅಂತಹ ವ್ಯತ್ಯಾಸವೇನೂ ಇಲ್ಲ' – ಎನ್ನುವ ಲೇಖಕರ ಮಾತನ್ನು ಒಪ್ಪುವಿರಾ ? ಚರ್ಚಿಸಿ.

5) ದಿನಕರ ನಿಜವಾಗಿಯೂ ನಕ್ಸಲೈಟ್ ಆಗಿರುವನೇ ? ಹಾಗಿದ್ದಲ್ಲಿ ನಕ್ಸಲಿಸಂನ ಸ್ವರೂಪ ಮತ್ತು ಉದ್ದೇಶಗಳೇನು ?

KLESNC MTM